# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 56/2022

ಸಿಡಬ್ಲ್ಯು: 23 / ಪಿಡಬ್ಲ್ಯು: 13

ದಿನಾಂಕಃ 03.03.2025

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹೇಶ ಹೂಗಾರ |
| ತಂದೆ ಹೆಸರು | : | ಈರಪ್ಪ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಪೋಲೀಸ ಮುಖ್ಯ ಪೇದೆ 1020, ಗದಗ ಗ್ರಾಮೀಣ ಪೋಲೀಸ ಠಾಣೆ |
| ವಾಸ ಸ್ಥಳ | : | ಗದಗ |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ

1. ನಾನು 2021 ರಿಂದ 2024 ವರೆಗೆ ಮುಂಡರಗಿ ಪೋಲೀಸ ಠಾಣೆಯಲ್ಲಿ ಪೋಲೀಸ ಪೇದೆಯಾಗಿ ಕೆಲಸ ಮಾಡುತ್ತಿದ್ದೆನು.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕಃ 05.03.2022 ರಂದು, ಚಾಸಾ-29 ರವರ ಆದೇಶದಂತೆ, ಘಟನಾ ಸ್ಥಳದ ಪಂಚನಾಮೆ ಕಾಲಕ್ಕೆ ನಿಪಿ-2 ಮತ್ತು 3 ರಂತೆ ಫೋಟೋಗಳನ್ನು ತೆಗೆದಿರುತ್ತೇನೆ. ಹಾಗೆಯೇ ಗದಗ ಜಿಲ್ಲಾ ಆಸ್ಪತ್ರೆಯಲ್ಲಿ ಶವದ ಪಂಚನಾಮೆ ಕಾಲಕ್ಕೆ ಕೂಡಾ ನಿಪಿ-7 ಮತ್ತು 8 ರಂತೆ ಫೋಟೋಗಳನ್ನು ತೆಗೆದಿರುತ್ತೇನೆ. ಹಾಗೆಯೇ ಆರೋಪಿತನ ಶರ್ಟ ಜಪ್ತ ಪಂಚನಾಮೆ ಕಾಲಕ್ಕೆ ಕೂಡಾ ನಿಪಿ-13 ಮತ್ತು 14 ರಂತೆ ಫೋಟೋಗಳನ್ನು ತೆಗೆದಿರುತ್ತೇನೆ. ಹಾಗೆಯೇ ಕೃತ್ಯಕ್ಕೆ ಬಳಸಿದ ಚಾಕು ಮತ್ತು ಮಚ್ಚು ಜಪ್ತ ಪಂಚನಾಮೆ ಕಾಲಕ್ಕೆ ಕೂಡಾ ನಿಪಿ-12 ರಂತೆ ಫೋಟೋವನ್ನು ತೆಗೆದಿರುತ್ತೇನೆ. ಹಾಗೆಯೇ ಮೃತನ ಮೈಮೇಲೆ ಇದ್ದ ಬಟ್ಟೆ ಜಪ್ತ ಪಂಚನಾಮೆ ಕಾಲಕ್ಕೆ ಕೂಡಾ ಫೋಟೋವನ್ನು ತೆಗೆದಿರುತ್ತೇನೆ. ಚೂರಿ ಜಪ್ತ ಕಾಲಕ್ಕೆ ಕೂಡಾ ನಿಪಿ-17 ರಂತೆ ಫೋಟೋವನ್ನು ತೆಗೆದಿರುತ್ತೇನೆ.

3. ಈ ಎಲ್ಲಾ ಫೋಟೋಗಳನ್ನು ಠಾಣೆಯ ನಿಕ್ಕಾನ ಕಂಪನಿಯ ಕ್ಯಾಮೆರಾದಲ್ಲಿ ತೆಗೆದಿರುತ್ತೇನೆ. ಫೋಟೋಗಳನ್ನು ಕಂಪ್ಯೂಟರ ಮೂಲಕ ಸಿ.ಡಿ. ಗೆ ವರ್ಗಾಯಿಸಿ, ಸಿ. ಡಿ. ಯನ್ನು ತಯಾರಿಸಿ

ಕೊಟ್ಟಿರುತ್ತೇನೆ. ನಾನು ತಯಾರಿಸಿ ಕೊಟ್ಟ ಸಿ.ಡಿ.ಯನ್ನು ನೋಡಿದರೆ ಗುರುತಿಸುತ್ತೇನೆ. **ಈಗ ಸದರಿ ಸಿ.ಡಿ.ಯನ್ನು ನೋಡುತ್ತಿದ್ದು, ಅದನ್ನು ನಿಪಿ-21 ಎಂದು ಗುರುತಿಸಲಾಯಿತು.**

**4. ಈ ಬಗ್ಗೆ ನಾನು 65(ಬಿ) ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ಈಗ ಈಗ ನೋಡುತ್ತಿದ್ದು, ಅದನ್ನು ನಿಪಿ-22 ಎಂದು, ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು.**

5. ಈ ಬಗ್ಗೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟಿ ಸವಾಲುಃ ಶ್ರೀ ಎಸ್.ವಿ. ಗ್ರಾಮಪುರೋಹಿತ, ಆರೋಪಿ ಪರ (CLADC) ವಕೀಲರಿಂದಃ**

6. ಫೋಟೋಗಳನ್ನು ತೆಗೆಯಲು ತನಿಖಾಧಿಕಾರಿಯು ಲಿಖಿತ ಆದೇಶವನ್ನು ಮಾಡಿರಲಿಲ್ಲ. ಫೋಟೋಗಳನ್ನು ತೆಗೆಯುವ ಬಗ್ಗೆ ನನಗೆ ತರಬೇತಿಯನ್ನು ಕೊಡಲಾಗಿರುತ್ತದೆ. ನಿಕ್ಕಾನ ಕಂಪನಿಯ ಕ್ಯಾಮೆರಾದ ಮಾಡೆಲ್ ನಂಬರನ್ನು ನಿಪಿ-22 ರಲ್ಲಿ ನಮೂದು ಮಾಡಿರುವುದಿಲ್ಲ. ಸದರಿ ಕ್ಯಾಮೆರಾವು ಡಿಜಿಟಲ್ ಕ್ಯಾಮೆರಾ ಆಗಿರುತ್ತದೆ. ಡಿಜಿಟಲ್ ಕ್ಯಾಮೆರಾದಲ್ಲಿ ಸಮಯ ಮತ್ತು ದಿನಾಂಕವನ್ನು ಫೋಟೋಗಳಲ್ಲಿ ಬರುವಂತೆ ಅಳವಡಿಸಬಹುದಾಗಿರುತ್ತದೆ ಎಂದರೆ ಸರಿ. ನಿಪಿ-2, 3, 13, 14 ಮತ್ತು 17 ಫೋಟೋಗಳಲ್ಲಿ ದಿನಾಂಕ ಮತ್ತು ಸಮಯ ಇರುವುದಿಲ್ಲ ಎಂದರೆ ಸಾಕ್ಷಿಯು, ದಿನಾಂಕ ಮತ್ತು ಸಮಯವನ್ನು ಅಳವಡಿಸಿಕೊಂಡು ತೆಗೆದಿರುವುದಿಲ್ಲ ಎಂದು ಹೇಳಿರುತ್ತಾರೆ.

7. ನಾನು ಯಾವುದೇ ಫೋಟೋಗಳನ್ನು ತೆಗೆದಿರುವುದಿಲ್ಲ ಮತ್ತು ಆದ್ದರಿಂದ ಸದರಿ ಫೋಟೋಗಳಲ್ಲಿ ದಿನಾಂಕ ಮತ್ತು ಸಮಯ ಇರುವುದಿಲ್ಲ ಎಂದರೆ ಸರಿಯಲ್ಲ. ಫೋಟೋಗಳನ್ನು ಕಂಪ್ಯೂಟರ ಮೂಲಕ ಸಿ.ಡಿ.ಗೆ ವರ್ಗಾಯಿಸುವ ಸಮಯದಲ್ಲಿ ಪಂಚನಾಮೆಯನ್ನು ಮಾಡಿರುವುದಿಲ್ಲ. ನಿಪಿ-2, 3, 13, 14 ಮತ್ತು 17 ಫೋಟೋಗಳನ್ನು, ನಿಪಿ-21 ಮತ್ತು 22 ಗಳನ್ನು ತನಿಖಾಧಿಕಾರಿಗಳ ಮಾತು ಕೇಳಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

ಗದಗ

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 56/2022

ಸಿಡಬ್ಲುಃ 24 / ಪಿಡಬ್ಲುಃ 14

ದಿನಾಂಕಃ 03.03.2025

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಅಂದಪ್ಪ ಅಣಜಿ |
| ತಂದೆ ಹೆಸರು | : | ಫಕೀರಪ್ಪ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಪೋಲೀಸ ಮುಖ್ಯ ಪೇದೆ 450, ಗದಗ ಶಹರ ಪೋಲೀಸ ಠಾಣೆ |
| ವಾಸ ಸ್ಥಳ | : | ಗದಗ |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ

1. ನಾನು 2021 ಮತ್ತು 2022 ರಲ್ಲಿ ಮುಂಡರಗಿ ಪೋಲೀಸ ಠಾಣೆಯಲ್ಲಿ ಪೋಲೀಸ ಪೇದೆಯಾಗಿ ಕೆಲಸ ಮಾಡುತ್ತಿದ್ದೆನು.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕಃ 25.04.2022 ರಂದು, ಚಾಸಾ-29 ರವರು ನನಗೆ ಗುನ್ನಾ ಜಾಗೆಯನ್ನು ಚಾಸಾ-26 ರವರಿಗೆ ತೋರಿಸಬೇಕೆಂದು ಆದೇಶವನ್ನು ಮಾಡಿದ್ದು, ಆ ಪ್ರಕಾರ ನಾನು ಅದೇ ದಿನ ಚಾಸಾ-26 ರವರನ್ನು ಕರೆದುಕೊಂಡು ಅತ್ತಿಕಟ್ಟಿ ತಾಂಡಾದಲ್ಲಿರುವ ಸೇವಾಲಾಲ ದೇವಸ್ಥಾನಕ್ಕೆ ಹೋಗಿ, ಘಟನಾ ಜಾಗೆಯನ್ನು ತೋರಿಸಿದ್ದು, ಚಾಸಾ-26 ರವರು ಸದರಿ ಸ್ಥಳವನ್ನು ಪರಿಶೀಲನೆ ಮಾಡಿ, ನಕಾಶೆಯನ್ನು ತಯಾರಿಸಿರುತ್ತಾರೆ.

3. ಈ ಬಗ್ಗೆ ತನಿಖಾಧಿಕಾರಿಗಳ ಮುಂದೆ ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟಿ ಸವಾಲುಃ ಶ್ರೀ ಎಸ್.ವಿ. ಗ್ರಾಮಪುರೋಹಿತ, ಆರೋಪಿ ಪರ (CLADC) ವಕೀಲರಿಂದಃ**

4. ಚಾಸಾ-29 ರವರು ನನಗೆ ಮೌಖಿಕ ಆದೇಶವನ್ನು ಮಾಡಿದ್ದರು. ನಾನು ನನ್ನ ಹೇಳಿಕೆಯಲ್ಲಿ ಮೌಖಿಕ ಆದೇಶದ ಪ್ರಕಾರ ಹೋಗಿರುತ್ತೇನೆ ಎಂದು ಹೇಳಿರುವುದಿಲ್ಲ, ಆದರೆ ಆದೇಶದ ಪ್ರಕಾರ ಹೋಗಿರುತ್ತೇನೆ ಎಂದು ಹೇಳಿರುತ್ತೇನೆ. ಆ ದಿನ ಚಾಸಾ-29 ರವರು ಬೆಳಿಗ್ಗೆ 10.30/11.00 ಗಂಟೆಗೆ

ಮೌಖಿಕ ಆದೇಶವನ್ನು ಮಾಡಿದ್ದರು.

5. ಆ ದಿನ ಚಾಸಾ-26 ರವರು ನಮ್ಮ ಪೋಲೀಸ ಠಾಣೆಗೆ ಬಂದಿದ್ದರು. ಚಾಸಾ-26 ರವರನ್ನು ಕರೆದುಕೊಂಡು ನಾನು ಖಾಸಗಿ ವಾಹನದಲ್ಲಿ ಹೋಗಿರುತ್ತೇನೆ. ನಾನು ನನ್ನ ಹೇಳಿಕೆಯಲ್ಲಿ ಖಾಸಗಿ ವಾಹನದಲ್ಲಿ ಚಾಸಾ-26 ರವರನ್ನು ಕರೆದುಕೊಂಡು ಹೋಗಿರುತ್ತೇನೆ ಎಂದು ಹೇಳಿರುವುದಿಲ್ಲ. ಗುನ್ನಾ ಸ್ಥಳದಲ್ಲಿ ಸುಮಾರು ಒಂದರಿಂದ ಎರಡು ತಾಸುಗಳವರೆಗೆ ಇದ್ದೆವು. ಚಾಸಾ-26 ರವರು ಸ್ಥಳದಲ್ಲಿಯೇ ನಕಾಶೆಯನ್ನು ತಯಾರಿಸಿರುತ್ತಾರೆ.

6. ನಾನು ಚಾಸಾ-26 ರವರನ್ನು ಕರೆದುಕೊಂಡು ಗುನ್ನಾ ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ನಾನು ಚಾಸಾ-29 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

## ಮರು ವಿಚಾರಣೆ – ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**